# ಮನಪರಿವರ್ತನೆ



ಸಿರಿಪುರ ಎಂಬ ಪಟ್ಟಣದಲ್ಲಿ ಸೋಮಶೇಖರ ಎಂಬ ವರ್ತಕನಿದ್ದನು. ಅವನು ಎಷ್ಟೇ ಸಂಪತ್ತಿದ್ದರೂ ಯಾರೊಬ್ಬರಿಗೂ ಹಣಕಾಸಿನಲ್ಲಿ ನೆರವಾಗಲೀ, ದಾನವಾಗಲೀ ನೀಡುತ್ತಿರಲಿಲ್ಲ. ಕಾಡಿ ಬೇಡಿದರೂ ಸಹ ಯಾವುದೇ ರೀತಿಯ ಸಹಾಯವನ್ನೂ ಮಾಡುತ್ತಿರಲಿಲ್ಲ. ಅಷ್ಟೊಂದು ಜಿಪುಣನೂ ನಿಷ್ಕರುಣೆಯುಳ್ಳವನೂ ಆಗಿದ್ದನು. ಅವನು ಎಷ್ಟೇ ಸಂಪಾದನೆ ಮಾಡಿದರೂ ಅದು ತನ್ನ ಹೆಂಡತಿ ಮಕ್ಕಳು ಹಾಗೂ ಸ್ವಂತ ಕುಟುಂಬಕ್ಕೆ ಸೇರಿದ್ದೆಂಬ ಇರಾದೆ ಅವನದಾಗಿತ್ತು. ಈತನನ್ನು ಮತ್ತು ಈತನ ಜಿಗುಟುತನದ ಸ್ವಭಾವವನ್ನು ಬಹಳ ಸಮಯದಿಂದ ಅವನ ನೆರೆಯ ನಿವಾಸಿಯೂ, ಸ್ನೇಹಿತನೂ ಆಗಿದ್ದ ರಾಜಶೇಖರ ಗಮನಿಸುತ್ತಾ ಬಂದಿದ್ದನು. ಹೇಗಾದರೂ ಸರಿ, ಸೋಮಶೇಖರನ ಮನ ಪರಿವರ್ತನೆ ಮಾಡಿ ಅವನನ್ನು ಜನಾನುರಾಗಿಯನ್ನಾಗಿ ಹಾಗೂ ಒಬ್ಬ ಸಂಭಾವಿತನನ್ನಾಗಿ ಮಾಡಬೇಕೆಂದು ಅನೇಕ ಬಾರಿ ಪ್ರಯತ್ನಿಸಿದರೂ ಪ್ರಯೋಜನವಾಗಿರಲಿಲ್ಲ. ಆದರೂ ದೂರದಲ್ಲೇನೋ ಸಣ್ಣ ಆಸೆ ಇರಿಸಿಕೊಂಡಿದ್ದ ರಾಜಶೇಖರನಿಗೆ ಅದೊಂದು ದಿನದ ಅವಕಾಶವನ್ನು ಕೊನೆಯದಾಗಿ ಉಪಯೋಗಿಸಿ ಬಿಡೋಣ ಎಂದು ಹೊರಟನು.

ಎಷ್ಟೇ ಜಿಪುಣನಾಗಿದ್ದರೂ ಸೋಮಶೇಖರನು ಭಗವದ್ಭಕ್ತನಾಗಿದ್ದನು. ವ್ಯಾಪಾರ ನಿರ್ವಹಣೆಯ ಒತ್ತಡದಲ್ಲಿ ಅವನಿಗಿಷ್ಟವಾದ ದೇಗುಲಗಳನ್ನು ಬಹಳ ದಿನಗಳಿಂದ ಸಂದರ್ಶಿಸಿರಲಿಲ್ಲ. ಆ ದಿನ ಸಂಕ್ರಮಣವಾದ್ದರಿಂದ ವ್ಯಾಪಾರ ವ್ಯವಹಾರಕ್ಕೆ ಕೊಂಚ ಬಿಡುವು ಇತ್ತು. ಹಾಗಾಗಿ ಸೋಮಶೇಖರನು ತನ್ನ ಸಂಸಾರ ಸಮೇತನಾಗಿ ಬಂಡಿಯೊಂದನ್ನು ಗೊತ್ತು ಮಾಡಿ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಬರುವುದೆಂದು ಹೊರಟನು.

ಬೆಳಿಗ್ಗೆ ಅರಣೋದಯಕ್ಕೆ ಮುಂಚಿತವಾಗಿಯೇ ಸೋಮಶೇಖರನ ಕುಟುಂಬವನ್ನು ಹೊತ್ತ ಬಂಡಿ ನಿರ್ಜನ ಪ್ರದೇಶದ ರಸ್ತೆಯಲ್ಲಿ ಸಾಗುತ್ತದೆ. ಮನೆಯಿಂದ ಹೊರಟು ಒಂದು ತಾಸು ಕಳೆದಿರಬಹುದು. ವೇಗವಾಗಿ ಸಾಗುತ್ತಿದ್ದ ಬಂಡಿಯನ್ನು ಚಾಲಕ ಒಮ್ಮೆಲೇ ಬ್ರೇಕ್ ಹಾಕಿ ನಿಲ್ಲಿಸಿದ. ಏನಾಯಿತೆಂದು ನೋಡಲು, ರಸ್ತೆಯ ಅಡ್ಡಲಾಗಿ ಒಬ್ಬರಿಬ್ಬರಿಂದ ಅಲುಗಾಡಿಸಲು ಕಷ್ಟಸಾಧ್ಯವಾದ ದೊಡ್ಡ ದಿಮ್ಮಿಗಳನ್ನು ಇರಿಸಿದ್ದರು. ಇದನ್ನು ಗಮನಿಸಿದ ಎಲ್ಲರೂ ಬಂಡಿಯಿಂದ ಕೆಳಗಿಳಿದರು. ನಾಲ್ಕಾರು ದಿಮ್ಮಿಗಳಿದ್ದವು. ಗಟ್ಟಿ ಮುಟ್ಟಿನ ನಾಲ್ಕೈದು ಜನ ಕೂಡಿ ಸರಿಸುವುದಿದ್ದರೂ ತ್ರಾಸದಾಯಕವಾದ ಕೆಲಸ. ಗಂಡಸರೆಂದು ಇರುವುದು ಸೋಮಶೇಖರ ಮತ್ತು ಬಂಡಿಯ ಚಾಲಕ. ಸೋಮಶೇಖರನ ಮಕ್ಕಳಿಬ್ಬರು ಚಿಕ್ಕವರು. ಏನು ಮಾಡುವುದು ಎಂದು ಚಿಂತಿಸುತ್ತಿರುವಾಗಲೇ ಆಚೀಚೆ ಬದಿಯ ಪೊದೆಗಳ ಎಡೆಯಿಂದ ಏಳೆಂಟು ಜನ ಧಾಂಡಿಗರು ಒಮ್ಮೆಲೇ ಹಾರಿ ಚಾಲಕನ ಸಮೇತ ಸೋಮಶೇಖರ ಮತ್ತವನ ಕುಟುಂಬಿಕರನ್ನು ಸುತ್ತುವರೆದರು.

ಆ ಧಾಂಡಿಗರು ದರೋಡೆಕೋರರಂತೆ ಕಾಣುತ್ತಿದ್ದರು. ಕ್ಷಣಾರ್ಧದಲ್ಲಿ ಆ ಧಾಂಡಿಗರು ಸೋಮಶೇಖರ ಮತ್ತು ಅವನ ಹೆಂಡತಿ ಮಕ್ಕಳನ್ನು ತಾವು ತಂದಿದ್ದ ಹಗ್ಗದಿಂದ ಮರಕ್ಕೆ , ಅವರು ಎಷ್ಟೇ ಕಷ್ಟ ಪಟ್ಟರೂ ಬಿಡಿಸಿಕೊಂಡು ಹೋಗಲಾರದಂತೆ ಬಿಗಿಯಾಗಿ ಕಟ್ಟಿದರು. ಬಳಿಕ ಸೋಮಶೇಖರನ ಹಣದ ಚೀಲ, ಹೆಂಡತಿ ಮಕ್ಕಳು ಮೈ ಮೇಲೆ ಹಾಕಿ ಕೊಂಡಿದ್ದ ಬೆಲೆ ಬಾಳುವ ಒಡವೆಗಳನ್ನೆಲ್ಲ ಕಿತ್ತುಕೊಂಡು ಪರಾರಿಯಾದರು.

ಚಾಲಕನೂ ಸೇರಿ ಸೋಮಶೇಖರ ಮತ್ತು ಮನೆಯವರು ಅನ್ನ ನೀರಿಲ್ಲದ ಸ್ಥಿತಿಯಲ್ಲಿ ಸಮಯ ಕಳೆಯಬೇಕಾಯಿತು. ಸಂಜೆಯಾಗುತ್ತಾ ಬಂತು. ಇನ್ನೇನು ಮಾಡುವುದಪ್ಪಾ ಎಂದು ಸೋಮಶೇಖರ ಮತ್ತು ಆತನ ಮನೆ ಮಂದಿ ಯೋಚಿಸುತ್ತಿರುವಾಗಲೇ ಅದೇ ದಾರಿಯಾಗಿ ಸಾಗುವ ಒಂದು ಬಂಡಿ ಬಂತು. ಅದರಿಂದ ಸ್ವಾಮೀಜಿಯೊಬ್ಬರು ಕೆಳಗಿಳಿದರು. ಸೋಮಶೇಖರ